# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 185 (180) |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವವರು | : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : 10.12.2024 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಸಂಡೂರು ತಾಲ್ಲೂಕು, ನರಸಿಂಗಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಣಜಿತ್‌ಪುರ ಸ್ಪಾಂಜ್ ಐರನ್ ಕಾರ್ಖಾನೆಯ ತ್ಯಾಜ್ಯದಿಂದ ಬೆಳೆ ನಷ್ಟವಾಗುತ್ತಿರುವುದಾಗಿ ಸ್ಥಳಿಯ ರೈತರು ಪ್ರತಿಭಟನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ಒದಗಿಸುವುದು) | ಸದರಿ ಉದ್ದಿಮೆಯ ಕಾರ್ಯಾಚರಣೆಯಿಂದ ಉಂಟಾಗುವ ಮಾಲಿನ್ಯದಿಂದ ಬೆಳೆ ನಷ್ಟ ಆಗುತ್ತಿರುವುದಾಗಿ ಸಾರ್ವಜನಿಕರಿಂದ ದೂರುಗಳು ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ (KSPCB)ಗೆ ಸ್ವೀಕೃತವಾಗಿರುತ್ತವೆ. ಸದರಿ ದೂರುಗಳ ನಿಮಿತ್ತ, ಹಿರಿಯ ಪರಿಸರ ಅಧಿಕಾರಿ, ವಲಯ ಕಚೇರಿ, ವಿಜಯನಗರ ಇವರು ಪ್ರಾದೇಶಿಕ ಕಚೇರಿ, ಬಳ್ಳಾರಿ ಅಧಿಕಾರಿಗಳೊಂದಿಗೆ ರಣಜಿತ್‌ಪುರ ಸ್ಪಾಂಜ್ ಐರನ್ ಉದ್ದಿಮೆಯನ್ನು ದಿನಾಂಕ 18.09.2024 ರಂದು ಜಂಟಿ ಪರಿವೀಕ್ಷಣೆ ನಡೆಸಲಾಗಿದ್ದು, ಸದರಿ ಪರಿವೀಕ್ಷಣಾ ವರದಿಯಲ್ಲಿ ಕೆಲವು ನ್ಯೂನ್ಯತೆ ಮತ್ತು ಸಮ್ಮತಿ ಪತ್ರದ ಷರತ್ತುಗಳನ್ನು ಉಲ್ಲಂಘನೆ ಮಾಡಿರುವುದಾಗಿ ವರದಿ ನೀಡಿರುತ್ತಾರೆ.<br><br>ಆದುದರಿಂದ, KSPCB ಯು ರಣಜಿತ್‌ಪುರ ಸ್ಪಾಂಜ್ ಐರನ್ ಉದ್ದಿಮೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿ ಕಾರಣ ಕೇಳುವ ನೋಟಿಸನ್ನು ದಿನಾಂಕ 04.11.2024 ರಂದು ಜಾರಿ ಮಾಡಲಾಗಿರುತ್ತದೆ. ಸದರಿ ನೋಟಿಸ್‌ಗೆ ಉದ್ದಿಮೆಯವರು ಅನುಪಾಲನಾ ವರದಿಯನ್ನು ದಿನಾಂಕ 14.11.2024ರ ಪತ್ರದಲ್ಲಿ ನೀಡಿರುತ್ತಾರೆ. ಉದ್ದಿಮೆಯವರು ನೀಡಿರುವ ಅನುಪಾಲನಾ ವರದಿಯನ್ನು ಪರಿಶೀಲಿಸಿ, ಸೂಕ್ತ ಶಿಫಾರಸ್ಸಿನೊಂದಿಗೆ ಪರಿಶೀಲನಾ ವರದಿಯನ್ನು ನೀಡುವಂತೆ ಸೂಚಿಸಿ, ಹಿರಿಯ ಪರಿಸರ ಅಧಿಕಾರಿ, ವಲಯ ಕಚೇರಿ, ವಿಜಯನಗರ ಇವರಿಗೆ ದಿನಾಂಕ 02.12.2024 ರಂದು ಪತ್ರ ಬರೆಯಲಾಗಿದೆ. ಪರಿಶೀಲನಾ ವರದಿ ಸ್ವೀಕೃತವಾದ ನಂತರ, ಪರಾಮರ್ಶಿಸಿ ಕಾನೂನು ರೀತ್ಯ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದು KSPCB ಯು ತಿಳಿಸಿರುತ್ತದೆ. |
| ಆ | ಈ ರಣಜಿತ್‌ಪುರ ಸ್ಪಾಂಜ್ ಐರನ್ ಕಾರ್ಖಾನೆಯು ನೀರನ್ನು ಯಾವ ಮೂಲದಿಂದ ಪಡೆದುಕೊಳ್ಳುತ್ತಿದೆ ಇದಕ್ಕೆ ಸರ್ಕಾರ ಅನುಮತಿ ನೀಡಿದೆಯೇ; (ವಿವರಗಳೊಂದಿಗೆ ಮಾಹಿತಿ ನೀಡುವುದು) | ಸರ್ಕಾರದ ಆದೇಶ ದಿನಾಂಕ 30.01.2019 ರಲ್ಲಿ ಮೆ\|\| ರಣಜಿತ್‌ಪುರ ಇನ್ಫ್ರಾಸ್ಟ್ರಕ್ಚರ್ ಪ್ರೈ. ಲಿ., ಕಂಪನಿಗೆ ರೂ.475 ಕೋಟಿ ಬಂಡವಾಳ ಹೂಡಿಕೆಯ "Iron Ore Washing Plant, DRI Billets, Induction Furnace and Power" ಘಟಕವನ್ನು ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕಿನ ರಣಜಿತ್‌ಪುರ ಗ್ರಾಮದಲ್ಲಿ ಸ್ಥಾಪಿಸಲು ಅನುಮೋದನೆ ನೀಡಲಾಗಿದ್ದು, ಅನುಮೋದನೆಯಲ್ಲಿ ನೀರಿನ ಬಳಕೆಯ ಮೂಲವನ್ನು ಕೆಳಕಂಡಂತೆ ಪಡೆಯಲು ಅನುಮೋದನೆ ನೀಡಲಾಗಿದೆ.<br><br>"Water: . 40,00,000 LPD from Ground Water, 6,00,000 LPD from KUWSDB/WRD, 2,00,000 LPD from Rain Water Harvesting" |

| | | |
|---|---|---|
| | | ಉದ್ದಿಮೆದಾರರು ಕರ್ನಾಟಕ ಅಂತರ್ಜಲ ಪ್ರಾಧಿಕಾರದಿಂದ 856 ಕೆ.ಎಲ್.ಡಿ. ನೀರನ್ನು ಒಟ್ಟು 15 ಕೊಳವೆ ಬಾವಿಗಳಿಂದ ಹೊರ ತೆಗೆಯಲು ದಿನಾಂಕ 27.12.2021 ರಂದು ಅನುಮತಿಯನ್ನು ಪಡೆದಿರುವುದಾಗಿ KSPCB ಯು ವರದಿ ನೀಡಿರುತ್ತದೆ. |
| ಇ | ಸದರಿ ಕಾರ್ಖಾನೆಯವರು ರಸ್ತೆಗೆ ಅಡ್ಡಲಾಗಿ ಚೆಕ್‌ಪೋಸ್ಟ್ ನಿರ್ಮಾಣ ಮಾಡಿರುವುದರಿಂದ ಕೃಷಿ ಜಮೀನುಗಳಿಗೆ ತೆರಳಲು ಸ್ಥಳೀಯ ರೈತರಿಗೆ ತೊಂದರೆಯಾಗುತ್ತಿರುವುದಾಗಿ ತಿಳಿದು ಬಂದಿದ್ದು, ಇದನ್ನು ತೆರವುಗೊಳಿಸಲು ಕೈಗೊಂಡ ಕ್ರಮವೇನು? (ಮಾಹಿತಿ ನೀಡುವುದು) | ಈ ಘಟಕವು KIADB ಯಿಂದ ಭೂಮಿಯನ್ನು ಹಂಚಿಕೆ ಪಡೆದಿದ್ದು, ಜಮೀನಿನಲ್ಲಿ ಘಟಕದ ಸುರಕ್ಷತೆ ಮತ್ತು ಭದ್ರತೆಗಾಗಿ ನಿಯೋಜಿತ ಭೂಪ್ರದೇಶದಲ್ಲಿ ಪ್ರವೇಶ ದ್ವಾರವನ್ನು ನಿರ್ಮಾಣ ಮಾಡಿಕೊಂಡಿರುತ್ತಾರೆ. |

ಸಿಐ 359 ಎಸ್‌ಪಿಐ 2024

(ಎಂ.ಬಿ. ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು